ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ

ಉಪ ವಿಭಾಗಾಧಿಕಾರಿಗಳ ಕಾರ್ಯಾಲಯ ಬಾಗಲಕೋಟೆ ಉಪ ವಿಭಾಗ ಬಾಗಲಕೋಟೆ-587103

**Office of the Assistant Commissioner, Sub division Bagalkote**

ನಂ: ಅರಣ್ಯಹಕ್ಕು/ಸಿಆರ್-01/19-20 ಬಾಗಲಕೋಟೆ ದಿನಾಂಕ: 17-01-2020

ಗೆ,
ಮಾನ್ಯ ಜಿಲ್ಲಾಧಿಕಾರಿಗಳು
ಬಾಗಲಕೋಟೆ

ಮಾನ್ಯರೇ,

ವಿಷಯ: ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕು ಕಾಯ್ದೆಯಡಿ ದೃಢೀಕರಣ ಪತ್ರ ಕೊಡುವ ಕುರಿತು.

ಉಲ್ಲೇಖ: 1] ತಮ್ಮ ಪತ್ರ ಸಂಖ್ಯೆ: ಆರ್‌ಬಿ/ಎಲ್‌ಎನ್‌ಡಿ/ಸಿಆರ್- /15-16 ದಿನಾಂಕ: 22-06-2016
2]ತಹಶೀಲದಾರ ಹುನಗುಂದ ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ/ಸಿಆರ್-46/14-15 ದಿನಾಂಕ: 09-01-2020

*-*-*-*-*

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ 1 ರನ್ವಯ ಮಾನ್ಯ ಪ್ರಧಾನ ವ್ಯವಸ್ಥಾಪಕರು, ಮೆ: ದೊಡ್ಡಣ್ಣವರ ಬ್ರದರ್ಸ್ ಹಿರೇಮಾಗಿ ಇವರು ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ಹಕ್ಕು ಕಾಯ್ದೆಯಡಿ ದೃಢೀಕರಣ ಪತ್ರ ಕೊಡುವ ಕುರಿತು ನ್ಯೂನ್ಯತೆಗಳನ್ನು ಸರಿಪಡಿಸಿ ವರದಿ ಸಲ್ಲಿಸಲು ಸೂಚಿಸಿದ್ದು, ಅದರಂತ ತಹಶೀಲದಾರ ಹುನಗುಂದ ಇವರಿಗೆ ಪತ್ರ ಬರೆಯಲಾಗಿದ್ದು ಇರುತ್ತದೆ.

"ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ಹಕ್ಕು ಕಾಯ್ದೆ"ಯಡಿ ಅರಣ್ಯ ಹಕ್ಕು ಇಲ್ಲದಿರುವ ಕುರಿತು ದೃಢೀಕರಣ ಪತ್ರ ನೀಡುವ ಕುರಿತಂತೆ, ದಿನಾಂಕ: 19-12-2015 ರಂದು ತಾಲೂಕಾ ಮಟ್ಟದ ಅರಣ್ಯ ಹಕ್ಕು ಸಮಿತಿ ಸಭೆಯನ್ನು ನಡೆಸಿ, ಸಭೆಯ ನಡುವಳಿಗಳನ್ನು ಹಾಗೂ ಅವಶ್ಯಕ ದಾಖಲೆಗಳನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಿದ್ದು ಇರುತ್ತದೆ. ಈಗಾಗಲೇ ಮಾನ್ಯರವರಿಗೆ ಸದರಿ ದೃಢೀಕರಣ ಪತ್ರ ಕೊಡುವ ಕುರಿತು ಶಿಫಾರಸ್ಸು ಮಾಡಿ ಪ್ರಕರಣವನ್ನು ಸಲ್ಲಿಸಿದ್ದು, ಆದರೆ ಸಭಾ ನಡುವಳಿಯಲ್ಲಿ ಗ್ರಾಮಗಳ ಸರ್ವೇ ನಂಬರುಗಳನ್ನು ಉಲ್ಲೇಖಿಸದೇ ಸಭಾ ನಡುವಳಿಯನ್ನು ಹಾಜರು ಪಡಿಸಿದ್ದು, ಪ್ರಯುಕ್ತ ಪ್ರಕರಣವನ್ನು ಪರತ್ ಕಳಿಸಿದ್ದು ಇರುತ್ತದೆ.

ಕಾರಣ ಉಲ್ಲೇಖಿತ 2 ರ ಪ್ರಕಾರ ದಾಖಲೆಗಳು ಹಾಗೂ ತಹಶೀಲದಾರ ಹುನಗುಂದ ಇವರ ವರದಿಯನ್ವಯ ಗಣಿಗುತ್ತಿಗೆ ಸಂಖ್ಯೆ: 465 (ಹಳೆಯ) ಮತ್ತು ಹೊಸ ಗಣಿಗುತ್ತಿಗೆ ಸಂಖ್ಯೆ: 2394 ಇರುತ್ತದೆ. ಇದು ಹುನಗುಂದ ತಾಳೂಕಿನ ರಾಮಥಾಳ ಗ್ರಾಮದ ಅರಣ್ಯ ಜಮೀನು ಸರ್ವೇ ನಂ: 116 ಹಾಗೂ ಹಿರೇಮಾಗಿ ಗ್ರಾಮದ ಅಸನಂ: 65 ಒಟ್ಟು ಕ್ಷೇತ್ರ 39.20 ಹೇ. ಇರುತ್ತದೆ. ಅದರಂತೆ ಗಣಿಗುತ್ತಿಗೆ ಸಂಖ್ಯೆ: 1671 (ಹಳೆಯ) ಹಾಗೂ ಗಣಿಗುತ್ತಿಗೆ ಸಂಖ್ಯೆ: 2395 (ಹಳೆಯ) ಹೊಸ ಗಣಿ ಗುತ್ತಿಗೆ ಸಂಖ್ಯೆ: 2649 ಇವುಗಳು ಹುನಗುಂದ ತಾಲೂಕಿನ ಹಿರೇಮಾಗಿ ಗ್ರಾಮದ ಅಸನಂ: 65 ಮತ್ತು ಸೂಳೇಭಾವಿ(ಅಮಿನಗಡ) ಗ್ರಾಮದ ಅಸನಂ: 367 ಮತ್ತು ಐಹೊಳೆ ಗ್ರಾಮದ ಅಸನಂ: 166 ಒಟ್ಟು ಕ್ಷೇತ್ರ 43.30 ಹೇ. ಪ್ರದೇಶ ಇರುತ್ತದೆ. ತಹಶೀಲದಾರ ಹುನಗುಂದ ಇವರ ಕಾರ್ಯಾಲಯದಲ್ಲಿ ದಿನಾಂಕ: 19-12-2015 ರಂದು ತಾಲೂಕಾ ಅರಣ್ಯ ಹಕ್ಕು ಸದಸ್ಯರ ಸಮಿತಿ ಸಭೆಯ ನಡುವಳಿಯಲ್ಲಿ ಉಲ್ಲೇಖಿಸಿದಂತೆ, ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ಹಕ್ಕು ಕಾಯ್ದೆಯಡಿಯಲ್ಲಿ ದೃಢೀಕರಣ ಪತ್ರವನ್ನು ನೀಡಲು ಶಿಫಾರಸ್ಸು ಮಾಡಿ ವರದಿ ಸಲ್ಲಿಸಿರುತ್ತಾರೆ.

ಪ್ರಯುಕ್ತ ಸದರಿ ಅರ್ಜಿದಾರರಿಗೆ "ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಹಕ್ಕು ಕಾಯ್ದೆ"ಯಡಿ ದೃಢೀಕರಣ ಪತ್ರ ಕೊಡುವ ಕುರಿತು ತಹಶೀಲದಾರ ಹುನಗುಂದ ಇವರ ಲಗತ್ತಿಸಿದ ಸಭೆಯ ನಡುವಳಿಗಳು ಹಾಗೂ ಸಂಬಂಧಿಸಿದ ದಾಖಲೆಗಳನ್ನು ಈ ಪತ್ರಕ್ಕೆ ಲಗತ್ತಿಸಿ ಮಾನ್ಯರವರಲ್ಲಿ ಆದರ ಪೂರ್ವಕವಾಗಿ ಸಲ್ಲಿಸಿದೆ.

ಲಗತ್ತು: ಪುಟ ಸಂಖ್ಯೆ: 1 ರಿಂದ 141 ರವರೆಗೆ

ತಮ್ಮ ವಿಶ್ವಾಸಿ,
(signature)
ಉಪ ವಿಭಾಗಾಧಿಕಾರಿಗಳು,